ನಿರೂಪಣೆ, ವಿವರಗಳ ಸಾಂದ್ರತೆ, ಕವಿ ಭಾವ ಪ್ರತಿಮಾ ಪುನರ್‌ಸೃಷ್ಟಿ ಮತ್ತು ಆಕೃತಿ ಯಾವುದನ್ನೂ ಬೇರೆ ಮಾಡಿ ಕಾಣಲಾರದಂಥ ಒಂದು ಅವಿನಾಭಾವ ನಂಟು ಸಹಜವಾಗಿಯೇ ಏರ್ಪಟ್ಟಿರುತ್ತದೆ. ಹಾಗಿದ್ದೂ ತಮ್ಮ ಮುನ್ನುಡಿಯಲ್ಲಿ ಮುಗ್ಧನೊಬ್ಬನ ತೊದಲು ನುಡಿಗಳೋ ಎಂಬಂತೆ ತಮಗೆ ಶುದ್ಧ ಭಾಷೆ, ಪ್ರಕಾರದ ನುಡಿಗಟ್ಟು ಯಾವುದೂ ಗೊತ್ತಿರಲಿಲ್ಲ; ಈಗಲೂ ಗೊತ್ತಿಲ್ಲ, ತಮ್ಮ ಓದು ಅರೆಬರೆ ಎಂದೆಲ್ಲ ಮನಸ್ಸು ಬಿಚ್ಚಿ ತೋಡಿಕೊಂಡಿರುವುದನ್ನು ನೋಡಿದರೆ ಅರಿವು, ಅಧ್ಯಯನ ಮನುಷ್ಯನನ್ನು ಮತ್ತಷ್ಟು ವಿನೀತನನ್ನಾಗಿಸುತ್ತದೆ ಎಂಬ ಮಾತಿನಲ್ಲಿ ವಿಶ್ವಾಸ ಮೂಡುತ್ತದೆ.

ಈ ಸಂಕಲನದಲ್ಲಿ ಒಟ್ಟು ಏಳು ಕತೆಗಳಿವೆ. ಸಂಖ್ಯೆಯ ದೃಷ್ಟಿಯಿಂದ ನುಗಡೋಣಿಯವರು ಬರೆದಿರುವ ಕತೆಗಳ ಸಂಖ್ಯೆ ಕಡಿಮೆ. ಕಳೆದ ಮೂವತ್ತು ವರ್ಷಗಳಲ್ಲಿ ನಲವತ್ತು ಕತೆಗಳನ್ನು ಬರೆದಿರುವೆ ಎಂದು ಅವರೇ ಇಲ್ಲಿ ಹೇಳಿಕೊಂಡಿದ್ದಾರೆ. ಆದರೆ ಅವರ ಅನೇಕ ಕತೆಗಳನ್ನು, ಅವು ಓದುಗನಲ್ಲಿ ಉದ್ದೀಪಿಸುವ ಗಾಢ ಸಂವೇದನೆಯ ನೆಲೆಯಲ್ಲಿ ಕಾದಂಬರಿಗಳೆಂದೇ ಪರಿಗಣಿಸುವುದು ಸೂಕ್ತವೇನೋ. ಸದ್ಯದ ಸಂಕಲನದಲ್ಲಿಯೂ 'ಚುಕ್ಕಿ ಮದುವೆ ಪ್ರಸಂಗ' ಮತ್ತು 'ಶಾಂತಿ ಕುಟೀರ' ಎರಡೂ ಕಿರು ಕಾದಂಬರಿಗಳೇ. ಹಾಗಿದ್ದೂ ಇಲ್ಲಿನ ಏಳೂ ಕತೆಗಳು ವಸ್ತು, ಕೇಂದ್ರ, ತಂತ್ರ ಮತ್ತು ಆಶಯದ ನೆಲೆಯಲ್ಲಿ ಇದೇ ಸಂಕಲನದ ಕತೆಗಳ ಜೊತೆಗಿಟ್ಟು ನೋಡಿದರೂ, ನುಗಡೋಣಿಯವರ ಇದುವರೆಗಿನ ಕತೆಗಳ ಜೊತೆಗಿಟ್ಟು ನೋಡಿದರೂ ವಿಭಿನ್ನವಾಗಿಯೂ, ಆಕರ್ಷಕವಾಗಿಯೂ ಸೆಳೆಯುವುದು ವಿಶೇಷ.

ಸಾಂಸಾರಿಕ ಬಿಕ್ಕಟ್ಟುಗಳನ್ನು ಸಾಮಾಜಿಕ ಬಿಕ್ಕಟ್ಟುಗಳೊಂದಿಗಿಟ್ಟು ನೋಡುವ ಕತೆ 'ದಾಳಿ ನಡೆದಾವೋ ಅಣ್ಣ'. ಮಲ್ಲಯ್ಯನ ಇಡೀ ಬದುಕಿನ ಹಿನ್ನೋಟದಂತೆ ಸಾಗುವ ಕತೆ ಅವನ ಮಗ ಮತ್ತು ಮಗಳ ನಿಲುವುಗಳನ್ನು ಒಂದರ ಜೊತೆಗೆ ಇನ್ನೊಂದನ್ನಿಟ್ಟು ತೂಗುವಂತೆಯೇ ಅವನ ಜೀವಿತ ಕಾಲದಲ್ಲೇ ಸಾಮಾಜಿಕವಾಗಿ, ಆರ್ಥಿಕವಾಗಿ ಪರಿವರ್ತನೆಯ ಪಥದಲ್ಲಿರುವ ಜಗತ್ತು ಬದಲಾದ ಬಗೆಯನ್ನೂ ತೂಗಿ ನೋಡುತ್ತಿದೆ. ಜೀವನಮೌಲ್ಯ, ಮನುಷ್ಯ ಸಂಬಂಧಗಳು ಮತ್ತು ಬದುಕಿನ ಆದ್ಯತೆಗಳಲ್ಲಿ ಆಸ್ತಿ – ಹಣದ ಸ್ಥಾನ – ಇವುಗಳು ಒಂದು ಜೀವಮಾನದ ಅವಧಿಯಲ್ಲಿ, ಅದರ ಬೇರೆ ಬೇರೆ ಘಟ್ಟದಲ್ಲಿ ಬೇರೆ ಬೇರೆಯಾಗಿ ಕಾಣುವುದು ವ್ಯಕ್ತಿಯ ನೆಲೆಯಲ್ಲಿಯೇ ಸಮಷ್ಟಿಯ ನೆಲೆಯಲ್ಲಿಯೇ ಎನ್ನುವುದನ್ನು ತೀರ್ಮಾನಿಸುವುದು ಕಷ್ಟ. ಮನುಷ್ಯನ ನಿಲುವು, ಹಟ ಮತ್ತು ಛಲ ನಿಡುಗಾಲದ ಬದುಕಿನಲ್ಲಿ ನಿರರ್ಥಕ ಅನಿಸುವ ಅರಿವು ತರುವ ಸುಸ್ತು ಮತ್ತು ನಿತ್ರಾಣ ಮಲ್ಲಯ್ಯನಲ್ಲಿ ಕಾಣುತ್ತೇವೆ. ಈ ಸುಸ್ತು, ನಿತ್ರಾಣ, ಕಂಗಾಲುತನಕ್ಕೆ ಸಾಮಾಜಿಕವಾದ ಒಂದು ಆಯಾಮವನ್ನು ನುಗಡೋಣಿಯವರು ಅತ್ಯಂತ ಕಲಾತ್ಮಕವಾಗಿ, ಇಡೀ ಕತೆಯ ನೇಯ್ಗೆಯಲ್ಲಿ, ಹದವಾಗಿ ಮತ್ತು ಮಲ್ಲಯ್ಯನ ಕತೆಗೆ ಅದು ರೂಪಕವೋ ಅಥವಾ ಅದಕ್ಕೆ ಮಲ್ಲಯ್ಯನ ಕತೆಯೇ ರೂಪಕವೋ ಎಂಬುದು ಅರಿವಾಗದಂತೆ ತೊಡಿಸುತ್ತಾರೆ.

'ಚುಕ್ಕಿ ಮದುವೆ ಪ್ರಸಂಗ' ಕತೆಯ ಕೇಂದ್ರ ಪಾತ್ರ ನರಸವ್ವ. ಈಕೆಯ ಮಗಳು ಈರವ್ವ ಮತ್ತು ಅಳಿಯ ಸಣ್ಣಪ್ಪ. ಇವರ ಮಗಳು ಚುಕ್ಕಿಯ ಮದುವೆಯದೇ ಇಲ್ಲಿನ ಕತೆ. ನರಸವ್ವನ ಗಂಡ ಬೆಟ್ಟಪ್ಪ ಇದ್ದೂ ಇಲ್ಲದಂತಿರುವ ಚೆನ್ನಿಗರಾಯ. ಸ್ವಂತದ ಕಿಂಚಿತ್ ಲಾಭಕ್ಕೆ ಬಾಯಿಬಿಟ್ಟು, ದಾರಿತಪ್ಪಿದ ಗೂಳಿಯಂಥ ಶಿವರಾಜನಿಗೆ ಚುಕ್ಕಿಯನ್ನು ಕಟ್ಟುವ ಹುನ್ನಾರಕ್ಕೆ ತಲೆಯಾಡಿಸಿ ಈ ಸಂಸಾರಕ್ಕೆ ಸಂಕಟವನ್ನು ತಂದಿಟ್ಟಿದ್ದಾನೆ. ಮಠದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಚುಕ್ಕಿಯ ಮದುವೆಯನ್ನು ಶಿವ್ರಾಜನೊಂದಿಗೆ ನಿಗದಿ ಪಡಿಸಿದ್ದು ಬೆಟ್ಟಪ್ಪನೇ ಆದರೂ ಅದನ್ನೇ ಬಳಸಿಕೊಂಡು ಚುಕ್ಕಿಯ ಮದುವೆಯನ್ನು ಬೇರೆ ಯೋಗ್ಯ ವ್ಯಕ್ತಿಯೊಂದಿಗೆ ನಡೆಸುವ ಒಂದು ಯೋಜನೆಗೆ ನರಸವ್ವ ಸಜ್ಜಾಗುತ್ತಾಳೆ. ಇದಕ್ಕೆ ಮಠದ ಸಜ್ಜನರ, ಊರ ಪ್ರಜ್ಞಾವಂತರ ಬೆಂಬಲವಿದ್ದರೂ ಅಂಥವರು